<u>ಅಸಲು ದಾವಾ ಸಂಖ್ಯೆ: **67/2016**</u> ಡಿ.ಡಬ್ಲ್ಯೂ:- **1**

ದಿನಾಂಕಃ **20-06-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು:- ವಾದಿ ಪರ ವಕೀಲರಿಂದ:-</u>

ಚಂದ್ರಪ್ಪ ನನಗೆ ತಮ್ಮನಾಗಬೇಕು. ಈಗ ಕ್ಯಾಸಿನಕೆರೆ ಗ್ರಾಮದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರಾಗಿ ಕೆಲಸ ಮಾಡುತ್ತಿದ್ದಾರೆ. ದಾವಾ ಆಸ್ತಿಯನ್ನು ಖರೀದಿ ಮಾಡುವ ಬಗ್ಗೆ ಹೊನ್ನಾಳಿ ತಹಶೀಲ್ದಾರರವರನ್ನು ವಿಚಾರಿಸಿದ್ದು, ಸದರಿಯವರು ನಮಗೆ ದಾವಾ ಆಸ್ತಿಯನ್ನು ಖರೀದಿ ಮಾಡಲು ಕಾನೂನಿನ ಅಡಿಯಲ್ಲಿ ಯಾವುದೇ ತೊಡಕು ಇರುವುದಿಲ್ಲ ಎಂದು ಹೇಳಿದರು. ನಾನು ಈಗ ಶಿವಮೊಗ್ಗದಲ್ಲಿ ವಾಸವಾಗಿದ್ದೇನೆ. ನನ್ನ ಯಜಮಾನರು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಈಗ ನಿವೃತ್ತರಾಗಿದ್ದಾರೆ. ಕೆಂಚಿಕೊಪ್ಪ ಗ್ರಾಮದಲ್ಲಿ ನನ್ನ ಹೆಸರಿನಲ್ಲಿ ಜಮೀನು ಇರುತ್ತದೆ. ಸದರಿ ಜಮೀನು ನನ್ನ ಮಾವನವರ ಮೂಲಕ ನನಗೆ ಬಂದಿರುತ್ತದೆ. ಕೆಂಚಿಕೊಪ್ಪ ಗ್ರಾಮದಲ್ಲಿ ನನ್ನ ಹೆಸರಿಗೆ ಜಮೀನು ಇರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ಹೆಸರಿಗೆ ಸಂಬಂಧಪಟ್ಟಂತೆ ಯಾವುದೇ ಜಮೀನಿನ ಪಹಣಿ ಇಲ್ಲದಿದ್ದರೂ ಸಹ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತಹಶೀಲ್ದಾರ್ ರವರಿಗೆ ನಾನು ಕೃಷಿ ಕುಟುಂಬಕ್ಕೆ ಸೇರಿದ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸಿ ನಾನು ಕೃಷಿ ಕುಟುಂಬಕ್ಕೆ ಸೇರಿದ ಬಗ್ಗೆ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಿಪಿ-1 ಕ್ರಯ ಪತ್ರದಲ್ಲಿ " ಸದರಿ ಶೆಡ್ಯೂಲ್ ಸ್ವತ್ತು ನನ್ನ ಗೃಹ ಕೃತ್ಯದ ಆರ್ಥಿಕ ಅಡಚಣೆ ಸಲುವಾಗಿ ಕ್ರಯಕ್ಕೆ ಕೊಡಲು ನಿರ್ಧರಿಸಿ, ಈ ವಿಚಾರವನ್ನು ಪ್ರಚಾರ ಪಡಿಸಿದ ಪ್ರಕಾರ ಕಡಿಮೆ ಭೂಮಿ ಹೊಂದಿದ್ದು ಬಡತನದಲ್ಲಿರುವ ನೀವು ಸೊಪ್ಪು ಮತ್ತು ತರಕಾರಿ ಬೆಳೆಯುವ ಉದ್ದೇಶಕ್ಕಾಗಿ ಈ ಸ್ವತ್ತನ್ನು ನೀವು ಈ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದರಿಂದ ಈ ದಿವಸ ಈ ಪತ್ರಕ್ಕೆ ಸಾಕ್ಷಿ ಹಾಕಿದವರ ಸಮಕ್ಷಮ ಈ ಸ್ವತ್ತನ್ನು ಇಂದಿನ ಮಾರುಕಟ್ಟೆ ಬೆಲೆ ರೂ.71,000/- ಕ್ಕೆ ನಿಮಗೆ ಮಾರಾಟ ಮಾಡಿ "ಎಂದು ನಮೂದಾಗಿದೆ ಎಂದರೆ ಸರಿ.ಈ ದಿನ ನಾನು ನ್ಯಾಯಾಲಯಕ್ಕೆ ನಮ್ಮ ಯಜಮಾನರ ಜೊತೆ ಬಂದಿದ್ದೇನೆ. ನನ್ನ ಯಜಮಾನರಿಗೆ ನಿಪಿ-1 ದಾಖಲೆಯ ಬಗ್ಗೆ ಮತ್ತು ನನ್ನ ಪ್ರತಿವಾದ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ಗೊತ್ತು.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.